ಈಗ ಸದನವನ್ನು ಮಧ್ಯಾಹ್ನ 3.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2.28 ಗಂಟೆಗೆ ಮುಂದೂಡಲಾಯಿತು)

(ಸಭೆಯ ಕಲಾಪವು ಮಧ್ಯಾಹ್ನ 3 ಗಂಟೆ 52 ನಿಮಿಷಕ್ಕೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು:– ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯ ಅವರ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ. 2005ನೇ ಸಾಲಿನ "ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧ್ಯಾದೇಶ"ವನ್ನು ಮಂಡಿಸುತ್ತೇನೆ.

ಆ. ಭಾರತವನ್ನು ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ 2004, ಮಾರ್ಚ್ 31 ರ ಅಂತ್ಯದವರೆಗಿನ ಕರ್ನಾಟಕ ಸರ್ಕಾರದ ಲೆಕ್ಕಪರಿಶೋಧನಾ (ವಾಣಿಜ್ಯ) ವರದಿಯನ್ನು ಸಭೆಯ ಮುಂದಿಡುತ್ತೇನೆ.

ಆಧ್ಯಕ್ಷರು:– ಮಂಡಿಸಲಾಯಿತು.

ಚುನಾವಣಾ ಪ್ರಸ್ತಾಪ

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಹೆಚ್.ಕೆ. ಪಾಟೀಲ್‌ರವರ ಹೆಸರಿನಲ್ಲಿರುವ ಚುನಾವಣಾ ಪ್ರಸ್ತಾಪವನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ. "ಅಂಗವಿಕಲರ ಅಧಿನಿಯಮ 1995ನ್ನು ಅನುಷ್ಠಾನಗೊಳಿಸಲು ರಚಿಸಲಾಗಿರುವ ರಾಜ್ಯ ಸಮನ್ವಯ ಸಮಿತಿಗೆ, ಅಂಗವಿಕಲರ ಅಧಿನಿಯಮದ ಕಲಂ 13(2)(ಜೆ)ರಲ್ಲಿನ ಅವಕಾಶದಂತೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ."

ಅಧ್ಯಕ್ಷರು:– ಡಿ.ಮಂಜುವಾಥ್:– ಮಾನ್ಯ ಅಧ್ಯಕ್ಷರೆ, ಈಗ ಬೇಡಿಕೆ ಗಳನ್ನು ಮಂಡಿಸೋಣವೆ.

ಅಧ್ಯಕ್ಷರು:– ಈಗ ಕೃಷಿ ಮತ್ತು ತೋಟಗಾರಿಕೆ ಸಚಿವರು ಮೀನುಗಾರಿಕೆ ಸಚಿವರು ಇಲ್ಲ. ಈಗ ತಾನೇ...

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇವತ್ತು ಮಂತ್ರಿಗಳಿಗೆಲ್ಲಾ ಗೊತ್ತಿದೆಯಲ್ಲಾ ಬೇಡಿಕೆಗಳ ಮೇಲೆ ಚರ್ಚೆಯಾಗುತ್ತದೆ ಎಂದು.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಬೆಲ್ಸ್ ಇವರು ಇಂಟ್ರಡ್ಯೂಸ್ ಮಾಡುವುದು ಬೇಡ.

ಅಧ್ಯಕ್ಷರು:– ಮಂತ್ರಿಗಳು ಬರುತ್ತಿದ್ದಾರೆ. ನಾನು ಹೇಳಿದ್ದೇನೆ, ಈಗ ಶಿಕ್ಷಣ ಸಚಿವರು ಇದ್ದಾರೆ, ಅವರು ಮಂಡಿಸಲೆ. ಮಾನ್ಯ ಕೃಷಿ ಸಚಿವರು ಮತ್ತು ತೋಟಗಾರಿಕೆ ಸಚಿವರು ಬರುತ್ತಿದ್ದಾರೆ.

(ಗೊಂದಲ)

ಶ್ರೀ ಜಿ..ವಿ. ಶ್ರೀರಾಮರೆಡ್ಡಿ:– ಆಯಾಯ ಇಲಾಖೆ ಬೇಡಿಕೆಗಳನ್ನು ಮಂಡಿಸುವುದಕ್ಕಾದರೂ ಮಂತ್ರಿಗಳು ಇರಬೇಕಲ್ಲ. ಮಾನ್ಯ ಅಧ್ಯಕ್ಷರೆ, ಅದಕ್ಕೆ ಏನು ಅರ್ಥವಿದೆಯಾ?

ಶ್ರೀ ಜೆ.ವಿ. ಮಾಧುಸ್ವಾಮಿ:– ಬೇಡಿಕೆ ಮಂಡಿಸುವುದಕ್ಕೂ ಮಂತ್ರಿಗಳು ಬರುವುದಿಲ್ಲವೆಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ಮಂತ್ರಿಗಳನ್ನು ಕರೆಸಿ. ಅಯಾಯ ಇಲಾಖೆ ಮಂತ್ರಿಗಳು ಬೇಡಿಕೆಗಳನ್ನು ಮಂಡಿಸದೆ ಇದ್ದರೆ ಅದಕ್ಕೆ ಘನತೆಬೇಡವೆ?

ಶ್ರೀ ಜೆ.ಸಿ. ಮಾಧುಸ್ವಾಮಿ:– ದಯವಿಟ್ಟು ಅದಕ್ಕೆ ಅಲೋ ಮಾಡಬೇಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ನಮ್ಮನ್ನೆ ಕನ್‌ವಿನ್ಸ್ ಮಾಡುವುದಕ್ಕೆ ಬರುತ್ತೀರಲ್ಲ ನೀವು, ಅವರಿಗೆ ಆ ಮಾತನ್ನು ಹೇಳುವುದಿಲ್ಲವಲ್ಲ ತಾವು.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಅಲೋ ಮಾಡಿದರೆ ಶಾಸನಸಭೆಗೆ ಗೌರವ ಬರುತ್ತದಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ನಮ್ಮನ್ನೆ ಕನ್‌ವಿನ್ಸ್ ಮಾಡುವುದಕ್ಕೆ ಬರುತೀರಲ್ಲ, ಅವರಿಗೆ ಏನೂ ಹೇಳುವುದಿಲ್ಲವಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಐದು ವರ್ಷಕ್ಕೆ ಒಂದು ಸಲ ಆದರೂ ಕೂಡ ಡಿಮಾಂಡ್ಸ್ ಮಂಡನೆ ಮಾಡುವುದಕ್ಕೆ ಬರುವುದಿಲ್ಲವೆಂದರೆ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಡಿಮ್ಯಾಂಡ್ಸ್ ಮಂಡನೆ ಮಾಡುವುದಕ್ಕೆ ಮನಸೇ ಇಲ್ಲವೆಂದರೆ,

ಅಧ್ಯಕ್ಷರು:– ಶ್ರೀರಾಮರೆಡ್ಡಿಯವರೆ, ಶಿಕ್ಷಣ ಸಚಿವರು ಇಲ್ಲೆ ಇದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ಅವರದು ಡಿಮ್ಯಾಂಡ್ ಮಾಡಿಸಲೆಬೇಕಾದರೆ. ನಾವು ಬೇಡವೆಂದು ಹೇಳುವುದಿಲ್ಲ. ಮಾನ್ಯ ಮಂತ್ರಿಗಳು ನಿಮ್ಮದು ಬೇಕಾದರೆ ಮಾಡಿಸಿರಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಇದು ಕೃಷಿಯಿಂದ ಪ್ರಾರಂಭವಾಗಬೇಕು. ಮೀನುಗಾರಿಕೆ ಸಚಿವರು ಬರಬೇಕು ಇಲ್ಲೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಮಂಜುನಾಥರವರ ನಿಮ್ಮ ಬಗ್ಗೆ ಗೌರವ ಇದೆ. ನೀವು ಈ ರೀತಿ ಮಾತನಾಡಬಾರದು. ನೀವು ನಮಗೆ ಕನ್‌ವಿನ್ಸ್ ಮಾಡುವುದಕ್ಕೆ ಬರುತ್ತೀರಿ. ಆ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲೆ ಬಂದು ಮಂಡನೆ ಮಾಡತಕ್ಕಂಥಾದ್ದು ಅವರ ಜವಬ್ದಾರಿ. ಐದು ವರ್ಷಕ್ಕೆ ಒಂದು ಸಲ ಡಿಮ್ಯಾಂಡ್ಸ್ ಮಂಡನೆ ಮಾಡುವುದು. ಅದಕ್ಕೆ ಇವತ್ತು ಅವಕಾಶ ಇಲ್ಲ. ನಮ್ಮನ್ನೆ ಕನ್‌ವಿನ್ಸ್ ಮಾಡುವುದಕ್ಕೆ ಬರುತ್ತೀರಿ, ನೀವು ಅವರಿಗೆ ಹೇಳುವುದಿಲ್ಲವಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಅಜೆಂಡಾದಲ್ಲೆ ಇದೆ. ತಾವು ನಿನ್ನೇನೆ ಅಜೆಂಡಾ ಕಳುಹಿಸಿದ್ದೀರಿ. ಇವತ್ತು ಯಾವ್ಯಾವ ಡಿಮ್ಯಾಂಡ್ಸ್ ಮಂಡಿಸಬೇಕೆಂದು ಅದರಲ್ಲೆ ಇದೆ. ಈ ಸದನ ಎಂದರೆ ಅಷ್ಟು ಗೌರವ ಇಲ್ಲವೆ ಸರ್ ಅವರಿಗೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಈ ಮನೆಗೆ ಅಪಮಾನ, ನಾವು ಎಷ್ಟು ಎಂದು ಸಹಿಸಿಕೊಳ್ಳಬೇಕು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮತ್ತೊಂದು ಧರಣಿ ಮಾಡಬೇಕಾಗು ತ್ತದೆ.

ಅಧ್ಯಕ್ಷರು:– ಇನ್ನೊಂದು ಐದು ನಿಮಿಷದಲ್ಲೆ ನಿಮ್ಮ ಕೃಷಿ ಸಚಿವರು, ತೋಡಗಾರಿಕೆ ಸಚಿವರು...

ಶ್ರೀ ವಾಟಾಳ್ ನಾಗರಾಜ್:– ಎಲ್ಲಿದ್ದಾರೆ ಸಚಿವರು ಕರೆಸಿ, ಇಲ್ಲವೆಂದರೆ ಆ ಬೇಡಿಕೆಗಳನ್ನು

ಶ್ರೀ ಜೆ.ಸಿ. ಮಾಧುಸ್ವಾಮಿ:– ಓಟಿಗೆ ಹಾಕಿ, ರಿಜೆಕ್ಟ್ ಮಾಡಿಬಿಡುತ್ತೇವೆ.

ಅಧ್ಯಕ್ಷರು:– ಆಯಿತು, ದಯಮಾಡಿ ಬರುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಅಲ್ಲಿ ಯಾರಿದ್ದಾರೆ, ಈಗ ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಅವರು ಹಾಕಿಸಿಕೊಂಡು ಹೋಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಚಿವರು ಇರಬೇಕಾಗಿರುವುದು ಅಷ್ಟೆ ಅಲ್ಲ, ಅಲ್ಲಿರುವ ಸಂಖ್ಯೆ ನೋಡಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಕೌನ್ಸಿಲ್‌ಗೆ ಹೋಗಬೇಕಾಗುತ್ತದೆ. ಅವರು ಕೌನ್ಸಿಲ್‌ಗೆ ಹೋಗಿದ್ದಾರೆ. ಎಲ್ಲಾ ಇಲ್ಲೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ನಾವು ಇದ್ದೇವಲ್ಲ. ಯಾರು ಇಲ್ಲ ಎಂದಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ:– ಓಟಿಗೆ ಹಾಕಿಸಿ.

ಅಧ್ಯಕ್ಷರು:– ಈಗ ತೋಟಗಾರಿಕೆ ಸಚಿವರು ಇದ್ದಾರೆ.

(ಗೊಂದಲ)

ಅಧ್ಯಕ್ಷರು:– ದಯಮಾಡಿ ಬರುತ್ತಾರೆ. ಕರೆಸುತ್ತೇನೆ. ಈಗ ಎಲ್ಲರೂ...

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ:– ಯಾವಾಗ ಬರುತ್ತಾರೆ? ನಮಗೆ ಏನೂ ಕೆಲಸ ಇಲ್ಲವೆ? ಇದು ತಮಾಷೆಯಾಗಿ ಹೋಯಿತು.

ಶ್ರೀ ವಾಟಾಳ್ ನಾಗರಾಜ್:– ನೀವು ಯಾರು? ಗುರುಪಾದಪ್ಪ ನೀವು ಅರಣ್ಯ ಸಚಿವರು. ಇದು ನಿಮ್ಮದಲ್ಲ. ಆಯಾಯ ಇಲಾಖೆಯ ಬೇಡಿಕೆಗಳನ್ನು ಆಯಾಯ ಸಚಿವರು ಮಂಡಿಸಬೇಕು. ಇದು ಶಾಸನಸಭೆ. ಜವಾಬ್ದಾರಿ ಇಲ್ಲ. ನಿಮ್ಮ ಇಲಾಖೆಯ ಬೇಡಿಕೆ ಇದ್ದರೆ ಇಲ್ಲೆ ಇಡಲೆ.

(ಗೊಂದಲ)

ಅಧ್ಯಕ್ಷರು:– ಆಯಿತು. ದಯಮಾಡಿ ಸಹಕರಿಸಿ. ಮಾನ್ಯ ಮಾಧು ಸ್ವಾಮಿ, ಮಾನ್ಯ ಗುರುಪಾದಪ್ಪ ಅವರ ಮಾತಿಗೆ ಮಾತನಾಡುವುದು ಬೇಡ. ಈಗ ಏನಾಗಿದೆ ಎಂದರೆ ಸರ್ಕಾರದ ಕಡೆಯಿಂದ ಸರಿಯಾಗಿ ನಡೆದುಕೊಳ್ಳುತ್ತಿಲ್ಲ. ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಬೇಡಿಕೆಗಳು ಅವತ್ತಿನಿಂದ ಇದೆ. ಸಕಾಲದಲ್ಲೆ ಅವರು ಬರಬೇಕೆ. ನೀವು ಸುಮ್ಮನೆ ಏಕೆ ಮಾತನಾಡುತ್ತೀರಿ? ಅವರನ್ನು ಕರೆಸಿ.

ಶ್ರೀಗುರುಪಾದಪ್ಪ ನಾಗಮಾರಪಲ್ಲಿ:– ನೀವು ಯಾರು ಎಂದು ನಮ್ಮನ್ನು...

ಅಧ್ಯಕ್ಷರು:– ಆಯಿತು ಬಿಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ನೀವು ಯಾರು ಎನ್ನುವುದು ತಪ್ಪು. ನೀವು ಯಾವು ಎಂದರೆ ಏನರ್ಥ? ನಾನು ಮಂತ್ರಿ ಇದ್ದೇನೆ, ನನಗೂ ಜವಾಬ್ದಾರಿ ಇದೆ.

ಶ್ರೀ ವಾಟಾಳ್ ನಾಗರಾಜ್:– ನೀವು ಕೃಷಿ ಸಚಿವರಲ್ಲ.

ಅಧ್ಯಕ್ಷರು:– ವಾಟಾಳ್ ನಾಗರಾಜ್‌ರವರೆ ದಯಮಾಡಿ...

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಅದು ಹೇಳಿ, ನೀವು ಯಾರು ಎಂದು ಹೇಳುವುದು ತಪ್ಪು.

ಶ್ರೀ ವಾಟಾಳ್ ನಾಗರಾಜ್:– ನಿಮಗೆ ಮಂಡಿಸುವುದಕ್ಕೆ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್‌ರವರೆ ಏಕೆ ವಾದ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್:– ನಿಮ್ಮ ಇಲಾಖೆಯ ಬೇಡಿಕೆ ಮಂಡಿಸಿ, ಸಂತೋಷ.

(ಗೊಂದಲ)

ಶ್ರೀ ಮಾಧುಸ್ವಾಮಿ:– ನಾವು ಡಿವಿಜನ್‌ಗೆ ಒತ್ತಾಯ ಮಾಡುತ್ತೇವೆ. ಚರ್ಚೆ ಬೇಡ, ಓಟಿಗೆ ಹಾಕಿಸಿ.

ಅಧ್ಯಕ್ಷರು:– ಅದು ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಇದು ಖಂಡಿತ ಆಗುವುದಿಲ್ಲ. ಇದು ಸಭೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅಜೆಂಡಾದಲ್ಲೆ ಮೊದಲೆ ಇದು ಇರುವುದು.

ಶ್ರೀ ಮಾಧುಸ್ವಾಮಿ:– ಇವತ್ತು ಕೃಷಿ ಬೇಡಿಕೆ ಬರುತ್ತಿರುವುದು 2ನೇ ದಿವಸ.

ಅಧ್ಯಕ್ಷರು:– ಮಂತ್ರಿಗಳು ಬರುತ್ತಾರೆ, ವಾಟಾಳ್ ನಾಗರಾಜ್‌ರವರೆ ದಯಮಾಡಿ ಕುಳಿತುಕೊಳ್ಳಿ. ನಿಮ್ಮ ಭಾವನೆಗಳನ್ನು ತಿಳಿಸಿದ್ದೀರಿ. ನಾನೂ ಸಹ ಸರ್ಕಾರಕ್ಕೆ ಹೇಳಿದ್ದೇನೆ. ಈ ರೀತಿ ನಡೆಸುವುದಾದರೆ ಗೌರವ ತರುವುದಿಲ್ಲ. ಈಗ ಏನು ಬೇಡಿಕೆಗಳು ಇವೆ. ಅದಕ್ಕೆ ಆಯಾಯ ಸಂಬಂಧಪಟ್ಟ ಸಚಿವರು ಸಕಾಲಕ್ಕೆ ಇಲ್ಲದೆ ಇದ್ದರೆ ಏನರ್ಥ. ಇದು ಶೋಭೆ ತರುವುದಿಲ್ಲ. ಆದುದರಿಂದ ಸಂಬಂಧಪಟ್ಟವರನ್ನು ಕರೆಸಿ ಎಂದು ಹೇಳುತ್ತಿದ್ದೇನೆ. ಈಗ ನಾನು ಹೇಳಿದಂತೆ ಎಲ್ಲಾ ಸದಸ್ಯರಿಗೂ ನನ್ನ ವಿನಂತಿ ಏನೆಂದರೆ ಈಗ ಶಿಕ್ಷಣ ಸಚಿವರು ಇದ್ದಾರೆ. ಅವರು ಅವರ ಇಲಾಖೆಯ ಬೇಡಿಕೆ ಮಂಡನೆ ಮಾಡುತ್ತಾರೆ. ಇನ್ನು ಉಳಿದ ಮಂತ್ರಿಗಳು ಬರುತ್ತಾರೆ, ಚರ್ಚೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಎಲ್ಲರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ಸದನದಲ್ಲೆ ಬಹಳ ಜನ ಮೊದಲನೆ ಬಾರಿಗೆ ಬಂದಂತಹವರು ಇದ್ದಾರೆ. ಅವರಿಗೆ ಸದನದ ಕಲಾಪಗಳ ಬಗ್ಗೆ ಹಾಗೂ ನಿಯಮಾವಳಿಗಳ ಬಗ್ಗೆ ಪರಿಚಯವಾಗಬೇಕು. ಸರ್ಕಾರ ಎನ್ನುವುದು ಸದನದಿಂದ ಉದ್ಭವ ಆಗುತ್ತದೆ. ಈ ಸದನಕ್ಕೆ ಪರಮೋಚ್ಚ ಅಧಿಕಾರವಿದೆ. ಸರ್ಕಾರದಲ್ಲೆ ಬೇರೆ ಬೇರೆ ಇಲಾಖೆಗಳ ಜವಾಬ್ದಾರಿ ಹೊತ್ತುಕೊಂಡಿರತಕ್ಕಂಥ ಮಂತ್ರಿಗಳು ತಮ್ಮೊಡನೆ ಸಮಲೋಚನೆ ಮಾಡಿ, ಇಂತಿಂತಹ ದಿವಸ ನಮ್ಮ ಬೇಡಿಕೆ ಮಂಡಿಸುವುದಕ್ಕೆ ಅವಕಾಶ ಬೇಕೆಂದು ಪರವಾನಗಿ ಪಡೆದುಕೊಂಡು ನಮಗೆಲ್ಲಾ ನೀವು ಅಜೆಂಡಾದಲ್ಲೆ ಕೊಡುತ್ತೀರಿ. ಮಂತ್ರಿಗಳು, ಈ ಸದನದ ಮಂಜೂರಾತಿ ಬೇಕು, ನಾನು ಈ ವರ್ಷಕ್ಕೆ ನನ್ನ ಇಲಾಖೆಯಲ್ಲೆ ಇಷ್ಟು ಹಣ ಖರ್ಚು ಮಾಡಬೇಕು, ಅದಕ್ಕೆ ಸದನದ ಒಪ್ಪಿಗೆ ಕೊಡಬೇಕೆಂದು ಕೇಳಬೇಕಾದವರು ತಾವು ಬಂದು ಪೀಠ ಅಲಂಕರಿಸಿದರೂ, ಸದನದಲ್ಲಿ ಸದಸ್ಯರು ಕೋರಂ ಕೊಟ್ಟಾಗ ಬೇಡಿಕೆಗಳನ್ನು ಕೇಳುವುದಕ್ಕೆ ಅವರು ಇಲ್ಲವೆಂದರೆ ಅವರಿಗೆ ನಿಯಮಾಳಿಗಳ ಪರಿಚಯ ಇದೆಯೋ ಇಲ್ಲವೋ?

ಶ್ರೀ ಕೆ.ಆರ್. ರಮೇಶ್‌ಕುಮಾರ್(ಮು):- ಅವರು ನನಗೆ ಈ ಸದನದ ಮಂಜೂರಾತಿ ಬೇಕು. ಈ ವರ್ಷಕ್ಕೆ ನನ್ನ ಇಲಾಖೆಯಲ್ಲಿ ಇಷ್ಟು ಹಣವನ್ನು ಖರ್ಚು ಮಾಡಬೇಕು. ಇದಕ್ಕೆ ಈ ಸದನದ ಒಪ್ಪಿಗೆಯನ್ನು ಅವರು ಕೇಳಬೇಕಾಗಿತ್ತು. ತಾವು ತಮ್ಮ ಪೀಠಕ್ಕೆ ಬಂದು ಆಸೀನರಾಗಿದ್ದೀರಿ. ಇಲ್ಲಿ ಸದನದಲ್ಲಿ ಸದಸ್ಯರೆಲ್ಲರೂ ಬಂದು ಕೋರಂ ಅನ್ನು ಕೊಟ್ಟಾಗ, ಬೇಡಿಕೆಯನ್ನು ಕೇಳುವುದಕ್ಕೆ ಇಲ್ಲವೆಂದರೆ, ಇದು ಅವರಿಗೆ ನಿಯಮಾವಳಿಗಳ ಪರಿಚಯ ಇದೆಯೋ, ಇಲ್ಲವೋ, ಬೇಡಿಕೆಗಳ ಪಾವಿತ್ರ್ಯತೆಯ ಬಗೆಗೆ ಗೊತ್ತಿದೆಯೋ, ಇಲ್ಲವೊ, ಈ ಸದನಕ್ಕೆ ಸಂವಿಧಾನ ಬದ್ಧವಾದಂತಹ ಶಕ್ತಿ, ಚೈತನ್ಯ, ನಿಗೂಢವಾಗಿ ಇರುವಂತಹ ಬಲ, ಇದು ಅವರಿಗೆ ಗೊತ್ತಿದೆಯೋ, ಇಲ್ಲವೋ, ನಾವು ಹೊರಗಡೆ ಜನರ ದೃಷ್ಟಿಯಲ್ಲಿ ಬಹಳ ಸಣ್ಣವರಾಗಿ ಬಿಡುತ್ತೇವೆ. ನಮ್ಮ ಕಷ್ಟ ಏನಾಗುತ್ತದೆ, ಎಂದರೆ ಅದನ್ನು ಹೇಳಲಾರೆವು, ನುಂಗಲಾರೆವು. ಇದನ್ನು ಹೇಗೆ ಸಮರ್ಥಿಸಿಕೊಂಡು ಇರುವಂಥಾದ್ದು. ನಾನು ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಒಂದು ಸಾರಿ ಅವರಿಗೆಲ್ಲಾ ಪರಿಚಯವಾಗಲಿ: ಯಾರ ಬೇಡಿಕೆ ಇವತ್ತು ಸದನದಲ್ಲಿ ಮಂಡನೆಯಾಗಬೇಕಾಗಿತ್ತೋ, ಯಾರು ಎದ್ದು ತಮ್ಮ ಪರವಾನಗಿಯನ್ನು ಪಡೆದುಕೊಂಡು, ಸಭೆಯಲ್ಲಿ ಯಾಚನೆ ಮಾಡಿ, ನಿಮ್ಮ ಅನುಮತಿ ಬೇಕು. ನಾನು ಬೇಡಿಕೆಗಳನ್ನು ಮಂಡಿಸುತ್ತಿದ್ದೇ ನೆಂದು, ಅವರು ಬಂದು ಕ್ಷಮಾಯಾಚನೆ ಮಾಡುವವರೆಗೂ ಆ ಬೇಡಿಕೆ ನಮ್ಮ ಕಾರ್ಯಕ್ರಮದ ಪಟ್ಟಿ ಪ್ರಾರಂಭವಾಗುವವರೆಗೆ, ದುಮಾಡಿ ಸದನವನ್ನು ಮುಂದಕ್ಕೆ ಹಾಕಿ, ಏನು ಕಷ್ಟವಾಗುತ್ತದೆಂಬುದನ್ನು ಹೇಳಿ. ಇಂತಹ ವಿಷಯದಲ್ಲೆಲ್ಲಾ, ನಾವು ಪಕ್ಷವನ್ನು ವಹಿಸಿಕೊಂಡು ಮಾತನಾಡುವುದಕ್ಕೆ ಆಗುತ್ತಿಲ್ಲ: ಅನುಭವ, ವಯಸ್ಸು, ಆದಗೆಲ್ಲಾ ನಾವು ಎಲ್ಲೊ ಒಂದು ಕಡೆ ಈ ಸಂಕುಚಿತ ಭಾವನೆಗಳನ್ನು ಮೀರಿ ನಡೆಯಬೇಕಾಗುತ್ತದೆ. ನಾವು ಈ ಸದನಕ್ಕೆ ಸೇರಿದವರು, ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಅದುದರಿಂದ ಮಾನ್ಯ ಅಧ್ಯಕ್ಷರೇ, ನಾನು ತಮಗೆ ಕೈ ಮುಗಿದು ಕೇಳುತ್ತೇನೆ. ಯಾವ ಮಂತ್ರಿಗಳಿಗೆ ಮಂಜೂರಾತಿ ಬೇಕೋ, ಆ ಮಂತ್ರಿಗಳು ಸದನದಲ್ಲಿ ಹಾಜರಿಲ್ಲದೇ ಹೋದರೆ ಹೇಗೆ? ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿ ಯವರಿಗೆ ಗೊತ್ತಿಲ್ಲ, ಅವರು ಕೂಗುತ್ತಿದ್ದಾರೆ. ಅವರು ಸಂಪುಟದ ಒಬ್ಬ ಸದಸ್ಯರು ಆಗಿ ಸರ್ಕಾರದ ಪರವಾಗಿ ನಾನು ಇಲ್ಲಿ ಇದ್ದೆನೆಂದು ಹೇಳುವಂಥಾದ್ದು ಬೇರೆ ವಿಚಾರಗಳಿಗೆ ಆಗುತ್ತದೆ. ಒಂದು ವೇಳೆ ಕೃಷಿ ಸಚಿವರು ಸದನದಲ್ಲಿ ಇಲ್ಲದೇ ಹೋಗಿದ್ದು, ಅವರು ಇಲ್ಲದೇ, ಅವರು ನಾನು ಇದ್ದೇನೆ,

ನೀವು ಮಂಡಿಸಿ ಎಂದು ಹೇಳಿದರೆ, ಇದು ಯಾವುದು ಆಗುವುದಿಲ್ಲ. ಅದು ತಪ್ಪು ಆಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೇ, ಅವರು ನೀವು ಯಾರು? ಎಂದು ಹೇಳಿದರೆ ಅದು ತಪ್ಪು ಆಗುವುದಿಲ್ಲವೆ? ಅವರು ಸದಸ್ಯರು, ಅನುಭವಿಗಳು, ಆಗಿದ್ದಾರೆ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ನೀವು ಚರ್ಚೆಯಾಗುವಂತಹ ಸಂದರ್ಭ ಗಳಲ್ಲಿ ಬರೆದುಕೊಳ್ಳಬಹುದು. ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿ ಯವರೇ, ಚರ್ಚೆಯನ್ನು ಬರೆದುಕೊಳ್ಳಬಹುದು, ಮಂಡನೆ ಮಾಡುವುದಕ್ಕೆ ಅಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನೀವು ಯಾರು ಎಂದು ಕೇಳುವಂಥದ್ದು ಸರಿಯೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಡಿಮಾಂಡ್ ಮೇಲೆ ಡಿಸ್‌ಕಷನ್‌ಗೆ ಇನಿಷಿಯೇಟ್ ಆಗದಿದ್ದರೆ, ಒಂದು ವೇಳೆ ಅವರು ಅಪ್ಪರ್ ಹೌಸ್‌ಗೋ, ಮತ್ತೊಂದು ಕಡೆಗೂ ಹೋಗಿದ್ದರೆ, ಆಗ ನೀವು ನೋಟ್ ಮಾಡಿಕೊಳ್ಳ ಬಹುದು, ಅವರಿಗೆ ಅಸಿಸ್ಟ್ ಮಾಡಬಹುದು. ಆದರೆ ಡಿಮಾಂಡ್ ಮೂವ್ ಮಾಡುವುದಕ್ಕೆ ಅವರು ಇಲ್ಲಿ ಇಲ್ಲದೇ ಹೋದರೆ ಈ ಹೌಸ್ ಯಾರಿಗೆ ವೋಟ್ ಮಾಡಬೇಕು. ಅಜೆಂಡಾ ಯಾರಿಗೆ ಇಷ್ಯೂ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ರಮೇಶ್‌ಕುಮಾರ್‌ರವರೇ, ತಾವು ಒಂದು ನಿಮಿಷ ಯೀಲ್ಡ್ ಆದರೆ ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ತಾವು ಇನ್ನೊಂದು ಯೋಚನೆ ಮಾಡಬೇಕು. ನಾವು ಇಷ್ಟು ದಿವಸಗಳ ನಂತರ ಬಜೆಟ್ ಅನುಮೋದನೆಗೆ ಇಲ್ಲಿ ಸೇರಿದ್ದು, ಇತರ ಬೇಡಿಕೆಗಳ ಮೇಲೆ ಚರ್ಚೆಯಾಗಬೇಕಾದ ಸಂದರ್ಭದಲ್ಲಿ. ಸಂಬಂಧಪಟ್ಟ ಸಚಿವರುಗಳಿಗೆ ಪುರುಸೊತ್ತು ಇಲ್ಲವೆಂದರೆ, ಅಥವಾ ಅವರು ಬೇರೆ ಕೆಲಸಗಳಲ್ಲಿ ತಲ್ಲೀನ ಆಗಿದ್ದರೆ, ರಾಜ್ಯದ ಅಭಿವೃದ್ಧಿ ಕೆಲಸಗಳು ಹೇಗೆ ಆಗುತ್ತದೆ? ಇಲಾಖೆಗಳ ಆ ಸಮಸ್ಯೆಗಳನ್ನು ಯಾರು ಬಗೆಹರಿಸಬೇಕು? ಅವರಿಗೆ ಇದರ ಬಗ್ಗೆ ಆಸಕ್ತಿ ಇಲ್ಲವೆಂದರೆ, ಅವರು ಯಾವುದೋ ಗುಂಗಿನಲ್ಲಿ, ಯಾವುದೋ ಗೊಂದಲದಲ್ಲಿ, ರಾಜಕೀಯದ ಕಚ್ಚಾಟದಲ್ಲಿ ತಲ್ಲೀನರಾಗಿ ಬಿಟ್ಟರೆ, ಇಲ್ಲಿ ಆಡಳಿತ ಪಕ್ಷದವರು ಆಸಕ್ತಿಯಿಂದ ಕುಳಿತು ಕೇಳಬೇಕು. ಯಾವ ಸಮಯದಲ್ಲಿ ಯಾವ ಡಿಮಾಂಡ್

ಬರುತ್ತದೊ, ಆಗ ಎದ್ದುನಿಂತುಕೊಂಡು, ಪರವಾನಿಗೆ ಬಗ್ಗೆ ಅವಕಾಶ ಪಡೆಯಬೇಕು. ಚರ್ಚೆಗೆ ಅನುಮತಿಯನ್ನು ತೆಗೆದುಕೊಳ್ಳಬೇಕೆನ್ನುವ ಇವರು ಗಮನವನ್ನು ಕೊಡುತ್ತಾರೆ? ಇಲ್ಲಿ ಅತ್ಯಂತ ಪ್ರಮುಖವಾದಂತಹ ಕೃಷಿ ಇದರ ಬಗ್ಗೆ ಅಲಸ್ಯವನ್ನು ಮಾಡಿದರೆ, ರೈತರ ಗತಿ ಏನು ಆಗಬೇಕು? ಇದು ಇಲ್ಲಿಗೆ ಸೀಮಿತವಾದುದ್ದು ಅಲ್ಲ. ಆದುದರಿಂದ ತಾವು ದಯಮಾಡಿ ಸದನವನ್ನು ಮುಂದೂಡಿ: ಇಲ್ಲದಿದ್ದರೆ ತಾವು ಒಂದು ಕೆಲಸವನ್ನು ಮಾಡಿ, ಇದನ್ನು ನೇರವಾಗಿ ಡಿಮಾಂಡ್‌ಗೆ ಹಾಕಿ, ನಾವು ಡಿವಿಜನ್‌ಗೆ ಒತ್ತಾಯ ಮಾಡುತ್ತೇವೆ, ತೀರ್ಮಾನ ಆಗಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಬೇರೆ ಡಿಮಾಂಡ್ ಈಗ ಹಾಕುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದನ್ನೆ ಮಾಡಲಿ, ನಾನು ಹೇಳುವಂಥಾದ್ದು ಮಾನ್ಯ ವಾಟಾಳ್ ನಾಗರಾಜ್‌ರವರೇ, ಈ ರಾಜ್ಯದ ಇತಿಹಾಸದಲ್ಲಿ ಒಂದು ಸಾರಿ ದಾಖಲೆಗೆ ಹೋಗಲಿ, ಮಂಡನೆ ಮಾಡಿ, ನಾವು ಚರ್ಚೆಯಲ್ಲಿ ಭಾವಹಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಯಡಿಯೂರಪ್ಪನವರೇ, ಇದು ಹಾಗೆ ಅಲ್ಲ. ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದೇ ವಿಷಯವಿರುವಂಥಾದ್ದು. ಈಗ ಈ ಸದನವನ್ನು ಮುಂದೂಡಬೇಕು. ಮಂತ್ರಿಗಳು ಬರುವವರೆಗೂ, ಅದು ಮಂಡನೆಯಾಗುವವರೆಗೂ ಇದು ಚರ್ಚೆಯಾಗುವಂತಹ ಪ್ರಶ್ನೆ ಉದ್ಭವವಾಗುವುದಿಲ್ಲ. ತಾವು ಈ ಸದನವನ್ನು ಮುಂದೂಡಿ, ಇದನ್ನು ನಾಳೆ ಬೇಕಾದರೆ ಬಂದು ಮಂಡನೆ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾವೇ ಹೊರಗಡೆ ಹೋಗೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬೇಡ, ಏಕೆ? ನಾವು ಹೊರಗಡೆ ಹೋದರೆ ಅವರು ಬೇಡಿಕೆಗಳನ್ನು ಮಂಡನೆ ಮಾಡಿ ಬಿಡುತ್ತಾರೆ. ಅವರಿಗೆ ಬುದ್ಧಿ ಬರಬೇಕು. ಇಲ್ಲಿ ಪದೇ ಪದೇ ಹೇಳಬೇಡಿ, ಮೊದಲನೆಯದಾಗಿ ಅಜೆಂಡಾದಲ್ಲಿ ಕೃಷಿ ಇರುವಂಥಾದ್ದು.

ಶ್ರೀ ಡಿ,ಮಂಜುನಾಥ್: ನನ್ನ ಖಾತೆಗೆ ಸಂಬಂಧಪಟ್ಟ ಬೇಡಿಕೆ ಮಂಡನೆ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೇ, ಮಾನ್ಯ ಮಾಧುಸ್ವಾಮಿಯವರೇ, ಈಗ ಸಭೆಯಲ್ಲಿ ಉನ್ನತ ಶಿಕ್ಷಣ ಸಚಿವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮಂಜುನಾಥ್‌ರವರೇ, ತಾವು ಈ ಸದನದ ಉಪಾಧ್ಯಕ್ಷರಾಗಿ ಇದ್ದಂಥವರು. ನೀವು ಈ ರೀತಿ ಹೇಳುತ್ತಿದ್ದೀರಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಹಿರಿಯರು ಈ ರೀತಿಯಾಗಿ ಮಾತನಾಡಬಾರದು.

ಅಧ್ಯಕ್ಷರು: ಮಾನ್ಯ ಉನ್ನತ ಶಿಕ್ಷಣ ಸಚಿವರು ಇದ್ದಾರೆ. ಶ್ರೀ ರಾಮಲಿಂಗಾರೆಡ್ಡಿಯವರು ಬಂದಿದ್ದಾರೆ. ಈಗ ಶಿಕ್ಷಣದ ಬಗ್ಗೆ ಮಂಡನೆ ಮಾಡಲಿ ಅವರು ಇದನ್ನು ಮಂಡನೆ ಮಾಡಲಿ. ಕೃಷಿ ಮತ್ತು ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ, ಸಂಬಂಧಪಟ್ಟ ಡಿಮಾಂಡ್ಸ್‌ಗಳು ಏನು ಇವೆ. ಅದನ್ನು ತಾವು ಇವತ್ತು ಅನೌನ್ಸ್ ಮಾಡಿ ಇವತ್ತು ಅದು ಚರ್ಚೆಗೆ ಇಲ್ಲವೆಂದು ತಿಳಿಸಬೇಕು. ಈಗ ಅಜೆಂಡಾದಲ್ಲಿ ಇದೆ, ನಾವೆಲ್ಲ ಅದನ್ನು ಒಟ್ಟಿಗೆ ಮಾತನಾಡುತ್ತೇವೆ.

ಅಧ್ಯಕ್ಷರು: ಈಗಾಗಲೇ ಎರಡು, ಎರಡೂವರೆ ದಿವಸಗಳಲ್ಲಿ ಸಮಯ ಹೋಗಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಪ್ರಾಮುಖ್ಯವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ನಾವೆಲ್ಲರೂ ಒಪ್ಪಿದ್ದೇವೆ. ಇಲ್ಲಿ ಮಂತ್ರಿಗಳು ತಮ್ಮ ಜವಾಬ್ದಾರಿ ಏನು, ನಾವು ಸದನಕ್ಕೆ ಯಾವ ರೀತಿಯಲ್ಲಿ ಬರಬೇಕು ಬೇಡಿಕೆ ಎಂದರೆ ಏನು? ಯಾವ ರೀತಿ ಮಂಡನೆ ಮಾಡಬೇಕು? ಎನ್ನುವಂಥಾದ್ದು ಬೇಕು. ಇದು ಜವಾಬ್ದಾರಿಯಾದ ಸದನ ಅಲ್ಲ. ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಶಾಸನಸಭೆ ಅತ್ಯುನ್ನತ ಸ್ಥಳವಾಗಿದೆ. ಈ ಶಾಸನಸಭೆಗೆ ಅಗೌರವವನ್ನು ಮಾಡಿ, ಅವರು ಯಾರು ಎಲ್ಲಿಗೆ ಹೋಗಿರಲಿ, ಅವರೇ ಮಂತ್ರಿಗಳು ಸದನಕ್ಕೆ ಬಂದು ಅವರ ಬೇಡಿಕೆಗಳನ್ನು ಮಂಡಿಸಬೇಕು. ಅದನ್ನು ಬಿಟ್ಟು ನಾಳೆ, ಆಗಲಿ ನಾಳಿದ್ದು ಆಗಲಿ, ಸಂಬಂಧಪಟ್ಟ ಎಲ್ಲಾ ಸಚಿವರು, ಎಲ್ಲಾ ಬೇಡಿಕೆಗಳಿಗೆ ಅವರೇ ಇರಬೇಕು, ಇದು ಬಿಟ್ಟು ಬೇರೆ ಪ್ರಶ್ನೆ ಇಲ್ಲ. ನಾನು ಅದನ್ನು ಅರಣ್ಯ ಸಚಿವರಿಗೆ ಉದ್ದೇಶಿಸಿ ಹೇಳಿದೆನು. ನಾನು ಅವರನ್ನು ಸಚಿವರಲ್ಲವೆಂದು ಹೇಳಿಲ್ಲ. ನಾನು

ಇದನ್ನು ಅವರಿಗೆ ಮಂಡನೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದು ಅದು ಬಿಟ್ಟು ನೀವು ಈಗ ಬೇಡಿಕೆಯ ಮೇಲೆ ಚರ್ಚೆಯಾಗುವಾಗ ಬೇಕಾದರೆ ಕೇಳಬಹುದು ಮತ್ತು ಬರೆದುಕೊಳ್ಳಬಹುದು. ಆದರೆ ಈ ಬೇಡಿಕೆಗಳನ್ನು ಮಂಡನೆ ಮಾಡಲು ನೀವು ಯಾರು? ಎಂದು ಕೇಳಿದ್ದು. ಅದು ಬಿಟ್ಟು ನಿಮ್ಮನ್ನು ಸಚಿವರಲ್ಲವೆಂದು ಕೇಳಿಲ್ಲ, ರಾಜೀನಾಮೆಯನ್ನು ಕೊಡಿ ಎಂದು ಕೇಳಿಲ್ಲ, ಅರಣ್ಯ ಸಚಿವರು ಅಲ್ಲವೆಂದು ಹೇಳಿಲ್ಲ, ಹೊರಗಡೆ ಹೋಗಿ ಎಂದು ಹೇಳಿಲ್ಲ. ತಾವು ಏನು ಇದರ ಬಗ್ಗೆ...

ಶ್ರಿ ಗುರುಪಾದಪ್ಪ ನಾಗಮಾರಪಲ್ಲಿ: ನೀವು ಯಾರು ಎಂದು ಕೇಳಿದ್ದೀರಿ? ಅದು ನನಗೆ ಆ ರೀತಿ ಆಯಿತು.

ಶ್ರೀ ವಾಟಾಳ್ ನಾಗರಾಜ್: ಆಯಿತು, ನಾನು ಯಾರು? ವಾಟಾಳ್ ನಾಗರಾಜ್, ಗೊತ್ತಾಯಿತಲ್ಲಾ... ಆದುದರಿಂದ ಇಲ್ಲಿ ತಮಗೆ ಮತ್ತು ಈ ಸದನಕ್ಕೆ ಗೌರವವನ್ನು ಕೊಟ್ಟಿಲ್ಲ. ತಮಗೆ ಗೌರವ ಕೊಟ್ಟಿಲ್ಲ. ಆದುದರಿಂದ ಇದು ಒಂದು ಸಾರಿ ಸದನವನ್ನು ಮುಂದಕ್ಕೆ ಹಾಕಿ.

ಮಂತ್ರಿಗಳಿಗೆ ಬುದ್ಧಿ ಬರಲಿ. ಸದನಕ್ಕೆ ಗೌರವ ಬೇಡವೆ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಈ ಸದನದ ಘನತೆ ಮೇಲೆ ಬರುತ್ತದೆ, ಸಭಾಧ್ಯಕ್ಷರ ಘನತೆ ಮೇಲೆ ಹೋಗುತ್ತದೆ, ಆದುದರಿಂದ ಈ ಸದನವನ್ನು ತಾವು ದಯಮಾಡಿ ಮುಂದಕ್ಕೆ ಹಾಕಿ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ಈಗ ಸದನಕ್ಕೆ ತೋಟಗಾರಿಕಾ ಸಚಿವರು ಬಂದಿದ್ದಾರೆ. ಕೃಷಿ ಮತ್ತು ತೋಟಗಾರಿಕೆಯ ಬೇಡಿಕೆಯನ್ನು ಮೂವ್ ಮಾಡುತ್ತಾರೆ. ಈಗ ಕೃಷಿ ಸಚಿವರು ಸದನಕ್ಕೆ ಬರುತ್ತಾ ಇದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಅವರು ತೋಟಗಾರಿಕೆ ಸಚಿವರು, ಅವರು ಕೃಷಿ ಸಚಿವರಲ್ಲ.

ಅಧ್ಯಕ್ಷರು: ಆಗಲಿ, ತಾವು ದಯಮಾಡಿ ಸಹಕರಿಸಿ, ಇದು ಆರಂಭ ಆಗಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರು ಎತ್ತಿನಗಾಡಿಯಲ್ಲಿ ಬರುತ್ತಿದ್ದಾರೊ, ಯಾವುದರಲ್ಲಿ ಬರುತ್ತಿದ್ದಾರೆ?

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಇದು ತಮ್ಮ ಗೌರವದ ಪ್ರಶ್ನೆ, ಈ ಸದನದ ಗೌರವದ ಪ್ರಶ್ನೆಯಾಗಿದೆ. ಈಗ ಯಾರು ಸದನಕ್ಕೆ ಲೇಟಾಗಿ ಬಂದಿದ್ದಾರೊ, ಅವರು ಮೊದಲು ಕ್ಷಮೆಯಾಚಿಸಬೇಕು, ಅನಂತರ ಬೇಡಿಕೆಯ ಬಗ್ಗೆ ಯಾಚನೆ ಮಾಡಬೇಕು. ಅಲ್ಲಿಯವರೆಗೂ ನಾವು ಧರಣಿ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಸರಿಯಾಗಿದೆ, ನಾವು ಧರಣಿ ಮಾಡುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾವು ಒಪ್ಪುವುದಿಲ್ಲ, ಮಾನ್ಯ ಕೃಷಿ ಸಚಿವರನ್ನು ಕರೆದುಕೊಂಡು ಬರಲಿ.

ಶ್ರೀ ವಾಟಾಳ್ ನಾಗರಾಜ್: ಸಚಿವರು ಬರಲಿ, ಇದು ಏನು ಬೇಜವಾಬ್ದಾರಿನಾ.. ಇದು ಸದನವೊ, ಏನೆಂದು ತಿಳಿದುಕೊಂಡಿದ್ದೀರಿ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಜೆ.ಸಿ.ಮಾಧುಸ್ವಾಮಿಯವರು ಹಾಗೂ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಧರಣಿ ಮಾಡಲು ಸದನದ ಬಾವಿಗೆ ಬರುತ್ತಿದ್ದರು)

ಅಧ್ಯಕ್ಷರು: ಈಗ ಸದನವನ್ನು ಕಾಲು ಗಂಟೆಗಳ ಕಾಲ ಮುಂದೂಡಲಾಗಿದೆ.

(ಸದನವು ಪುನಃ ಸಂಜೆ 4–20 ಗಂಟೆಗೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಜೆಡಿ(ಯು) ಪಕ್ಷದ ಮಾನ್ಯ ಸದಸ್ಯರುಗಳಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀಮತಿ ನಾಗಮಣಿ ನಾಗೇಗೌಡ, ಸಿ.ಪಿ.ಐ.(ಎಂ) ಪಕ್ಷದ ಸದಸ್ಯರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಮತ್ತು ಕನ್ನಡ ಚಳವಳಿ ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್ರವರು ಸದನದ ಬಾವಿಯಲ್ಲಿ ಇದ್ದರು)

ಅಧ್ಯಕ್ಷರು: ಮಾನ್ಯ ಕೃಷಿ ಸಚಿವರು ಸದನಕ್ಕೆ ಬಂದಿದ್ದಾರೆ. ಮಾನ್ಯ ಕೃಷಿ ಸಚಿವರೆ, ತಾವು ಸಕಾಲಕ್ಕೆ ತಮ್ಮ ಇಲಾಖೆಯ ಬಗ್ಗೆ ಬೇಡಿಕೆ ಮಂಡನೆ ಮಾಡುವುದಕ್ಕೆ ಬರುವುದಿಲ್ಲ.

(ಸದನದ ಬಾವಿಯಿಂದ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದರು)

ಅಧ್ಯಕ್ಷರು: ಮಾನ್ಯ ಕೃಷಿ ಸಚಿವರು ಸಭೆಯ ಯಾಚನೆ ಮಾಡ ಬೇಕೆಂದು ನಾನು ಸೂಚನೆ ನೀಡುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಮನೆಯ ವಿಚಾರದಲ್ಲಿ ನನಗೆ ಅಪಾರವಾದ ಗೌರವವಿದೆ. ನಾನು ಯಾವುದೋ ಒಂದು ಸಭೆಯನ್ನು ಮುಗಿಸಿಕೊಂಡು ಬರುವುದಕ್ಕೆ ಐದು ಹತ್ತು ನಿಮಿಷ ತಡವಾಯಿತು. ಆದ್ದರಿಂದ, ನಾನು ಕೂಡ ವಿರೋಧ ಪಕ್ಷದಲ್ಲಿದ್ದು ಕೊಂಡು 5 ವರ್ಷ ಕೆಲಸ ಮಾಡಿದ್ದೇನೆ. ನನಗೂ ಕೂಡ ಆ ಕಷ್ಟ ಸುಖಗಳು ಏನು ಎನ್ನುವುದು ಗೊತ್ತಿದೆ. ಗೊತ್ತಿಲ್ಲದೆ ನಾನೇನು ಉದ್ದೇಶ ಪೂರ್ವಕವಾಗಿ ತಡ ಮಾಡಿ ಬಂದಿಲ್ಲ. ಹಾಗಾಗಿ ಇವತ್ತು ನಾನು ಸದನಕ್ಕೆ ಸ್ವಲ್ಪ ನಿಧಾನವಾಗಿ ಬಂದಿದ್ದರಿಂದ ನಾನು ತಮ್ಮ ಮುಂದೆ ಸದನಕ್ಕೆ ಕ್ಷಮೆಯಾಚಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ತೋಟಗಾರಿಕೆ ಸಚಿವರು ಸಹ ಸಭೆಗೆ ಹೇಳಬೇಕು. ಅವರು ಕೂಡ ಹೇಳುತ್ತಾರೆ ಸಭೆಗೆ ಯಾರು ದೊಡ್ಡವರಲ್ಲ. ಸ್ವಲ್ಪ ತಡೆಯಿರಿ. ಅವರು ಸ್ವಲ್ಪ ನಿಧಾನವಾಗಿ ಸಭೆಗೆ ಬಂದಿದ್ದಾರೆ. ಅವರೂ ಸಹ ಸಭೆಗೆ ಕ್ಷಮೆಯಾಚಿಸುತ್ತಾರೆ.

(ಗೊಂದಲ)

ಶ್ರೀ ಆಲಂಗೂರು ಶ್ರೀನಿವಾಸ್ (ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಸದನಕ್ಕೆ ನಾನು ಸ್ವಲ್ಪ ತಡವಾಗಿ ಬಂದೆ. ಆದ್ದರಿಂದ ನಾನು ಸದನದ ಕ್ಷಮೆಯಾಚಿಸುತ್ತೇನೆ.

ಅಧ್ಯಕ್ಷರು: ಇವತ್ತು ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಪಟ್ಟ ಡಿಮ್ಯಾಂಡ್ ಅನ್ನು ಮಾತ್ರ ಮಂಡನೆ ಮಾಡುವುದಕ್ಕೆ ಅವರಿಗೆ ಸೂಚನೆ ಕೊಡುತ್ತೇನೆ. ಇವತ್ತು 8 ಗಂಟೆ ಆಗಲಿ, 8–30 ಗಂಟೆಯಾಗಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಮಾಡಿ ಸರ್ಕಾರದಿಂದ ಉತ್ತರ ಪಡೆದು ಮುಗಿಸೋಣ. ಏಕೆಂದರೆ ಎರಡು ದಿವಸ, ಮೂರು ದಿವಸ ಹೀಗೆ ಮುಂದೆ ಹೋಗುತ್ತದೆ. ಅವರು ಕಾಯುತ್ತಾ ಕುಳಿತುಕೊಳ್ಳಬೇಕಾಗುತ್ತದೆ. ಅನೇಕರಿಗೆ ಅನೇಕ ರೀತಿಯಲ್ಲಿ ತೊಂದರೆಯಾಗುತ್ತದೆ. ಆದ್ದರಿಂದ ಇವತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಮೇಲಿನ ಬೇಡಿಕೆಯನ್ನು 8 ಗಂಟೆಯಾಗಲಿ, 8–30 ಗಂಟೆಯಾಗಲಿ ಮುಗಿಸಿಬಿಡೋಣ. ನಾಳೆ ಬೇರೆ ವಿಷಯವನ್ನು ತೆಗೆದುಕೊಳ್ಳೋಣ. ಏಕೆಂದರೆ ನೀವು ಸಹ ಅದರಲ್ಲಿ ಭಾಗವಹಿಸುವುದಕ್ಕೆ ಮತ್ತು ಮಂತ್ರಿಗಳು ಸಹ ಉತ್ತರ ಕೊಡುವುದಕ್ಕೆ ಹೀಗೆ ಎಲ್ಲ ರೀತಿಯಿಂದ

ಅನುಕೂಲವಾಗುತ್ತದೆ.

(ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು: ಹಾಗಾದರೆ ಕೃಷಿ ಮತ್ತು ತೋಟಗಾರಿಕೆ ಬೇಡಿಕೆ ಬಗ್ಗೆಎಷ್ಟು ದಿವಸ ಚರ್ಚೆ ಮಾಡುತ್ತೀರಿ?

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಬಾರದು. ಅವರು ಕೂಡ ಬಾವಿಯೊಳಗೆ ನಿಂತುಕೊಂಡು ಮಾತನಾಡುತ್ತಿದ್ದಾರೆ. ಆವರು ಅಲ್ಲಿ ನಿಂತಿರುವುದರಿಂದ ಅವರು ಕೂಡ ಮಾತನಾಡಬಾರದು. ಅದು ಕೂಡ ಸರಿಯಾದ ಕ್ರಮವಲ್ಲ. ಅವರು ಕೂಡ ಅಲ್ಲಿ ಹೋಗಿ ನಿಂತು ಕ್ಷಮೆ ಕೇಳಬೇಕಾಗುತ್ತದೆ.

ಅಧ್ಯಕ್ಷರು: ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿರುವುದು ಸರಿಯಾದ ಕ್ರಮವಲ್ಲ, ನೀವು ಸಹ ಕ್ಷಮೆ ಕೇಳಬೇಕೆಂದು ಮಾನ್ಯ ಹಿರಿಯ ಸದಸ್ಯರು ಹೇಳುತ್ತಿದ್ದಾರೆ. (ನಗು)

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದು ಕೂಡ ಸದನದ ಗೌರವಕ್ಕೆ ಚ್ಯುತಿ ಬರುತ್ತದೆ. ಹಾಗಾಗಿ ಅವರೂ ಸಹ ಕ್ಷಮೆ ಕೇಳಬೇಕಾಗುತ್ತದೆ.

ಅಧ್ಯಕ್ಷರು: ಆಯಿತು. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಎಸ್.ಎಸ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಈಗತಾನೇ ಮಂತ್ರಿಗಳಿಗೆ ತಾವೇನು ಕ್ಷಮೆಯಾಚಿಸುವುದಕ್ಕೆ ಸೂಚಿಸಿದಿರಿ, ನನ್ನ ಒಂದು ರಿಕ್ವೆಸ್ಟ್, ಏನೆಂದರೆ, ಇಡೀ ಸದನದಲ್ಲಿರುವ ಸದಸ್ಯರು ಕೂಡ ಕ್ಷಮೆ ಕೇಳಬೇಕಾಗುತ್ತದೆ. ಹಾಗಾದಾಗ ಇಲ್ಲಿ ಕೋರಂ ಆಗುತ್ತದೆ. ಮಾನ್ಯ ಸದಸ್ಯರುಗಳದ್ದು ಸಹ ದೋಷ ಇರುವುದನ್ನು ನಾವು ಇಲ್ಲಿ ನೋಡುತ್ತಿದ್ದೇವೆ. ಬಹುಶಃ ಬಹಳಷ್ಟು ಸದಸ್ಯರು ಆ ಕಡೆಯೂ ಇರುವುದಿಲ್ಲ, ಈ ಕಡೆಯೂ ಇರುವುದಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಇರುವುದಿಲ್ಲ ರೀ. ನಾನು ನೋಡಿರುವುದನ್ನು ಹೇಳುತ್ತಿದ್ದೇನೆ. ಇವತ್ತು ಇದ್ದಾರೆ. ಆದರೆ ನಿಮಗೆ ನಾನು ತೋರಿಸುತ್ತೇನೆ. ಎಷ್ಟೋ ಸಲ ಕೋರಂ ಇರುವುದಿಲ್ಲ. ಕೋರಂ ಇಲ್ಲದಿದ್ದರೆ ಎಲ್ಲ ಸದಸ್ಯರುಗಳು ಇದ್ದಾರೆಂದು ಹೇಗೆ ಅರ್ಥವಾಗುತ್ತದೆ? ಕೋರಂ ಇಲ್ಲವೆಂದು ನಾನೇ ಸ್ವತಃ ಮಾನ್ಯ ಸಭಾಧ್ಯಕ್ಷರಿಗೆ ಮನವಿ ಮಾಡಿದ್ದೇನೆ. ಕೋರಂ ಇಲ್ಲದಿರುವುದರಿಂದ ಸದನವನ್ನು ಮುಂದೂಡಿ ಎಂದು ಹೇಳಿದ್ದೇನೆ. ಬಹುತೇಕ ಸದಸ್ಯರು ಇರುವುದಿಲ್ಲ. ಹೊಸ ಸದಸ್ಯರು ಕೂಡ ಇವತ್ತು ಕಾಣುವುದಿಲ್ಲ. ಸದನದಲ್ಲಿ ಎಲ್ಲ ಸದಸ್ಯರೂ ಇರಬೇಕೆಂದು ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.

ಅಧ್ಯಕ್ಷರು: ದಯಮಾಡಿ ಬಾವಿಯಲ್ಲಿರುವ ಸದಸ್ಯರು ತಮ್ಮ ತಮ್ಮ ಆಸನಗಳಿಗೆ ಹೋಗಬೇಕು. (ಸದನದ ಬಾವಿಯಲ್ಲಿದ್ದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಆಸನಗಳಿಗೆ ಹಿಂತಿರುಗಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಶ್ರೀ ಎಸ್.ಎಸ್. ಪಾಟೀಲರ ಗಮನಕ್ಕೆ ತರುವುದೇನೆಂದರೆ, ತಾವು ಬೇಕಾದರೆ ಮೊನ್ನೆ ಮೂರು ದಿವಸಗಳ ಕಾರ್ಯಕಲಾಪದ ಅಟೆಂಡೆನ್ಸ್ ನೋಡಿ, ಈಗಲೂ ನೋಡಿ. ಪ್ರತಿ ಪಕ್ಷದಲ್ಲಿ ಎಷ್ಟು ಜನ ಸದಸ್ಯರು ಇದ್ದೇವೋ ಅಷ್ಟು ಜನ ಆಡಳಿತ ಪಕ್ಷದಲ್ಲಿ ಇರುವುದಿಲ್ಲ. ಈ ನಿಮಿಷಕ್ಕೆ ಸಹ ತಾವು ನೋಡಬಹುದು. ಆದ್ದರಿಂದ ನಾವಿಲ್ಲಿ ಕುಳಿತು ಕೋರಂ ಉಂಟುಮಾಡಿ ಸಭೆ ಮಾಡಿಸುವಂಥ ದುಸ್ಥಿತಿಗೆ ಬಂದಿದೆ. ತಾವು ಅವರ ಕ್ಷಮೆ ಕೇಳುತ್ತೀದ್ದೀರಿ ಅದನ್ನು ನಾನು ಬೆಳೆಸುವುದಕ್ಕೆ (ಮುಂದುವರಿಸುವುದಕ್ಕೆ) ಹೋಗುವುದಿಲ್ಲ. ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡುವುದೇನೆಂದರೆ, ಮುಂದಿನ ತಿಂಗಳು 5ನೇ ತಾರೀಖಿನವರೆಗೆ ಈ ಅಧಿವೇಶನ ನಡೆಯುತ್ತದೆ. ಈ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದೇವೆ. ಒಂದೊಂದು ಬೇಡಿಕೆ ಮೇಲೆ ಎರಡೆರಡು ದಿವಸ ಸುಧೀರ್ಘವಾಗಿ ಚರ್ಚೆಯಾಗದೆ ಇದ್ದರೆ ಈ ತಿಂಗಳ 15ನೇ ತಾರೀಖಿಗೇ ಅಧಿವೇಶನ ಮುಗಿದುಹೋಗುತ್ತದೆ. ಅಧಿವೇಶನ ನಡೆಯುವುದೇ ಇಲ್ಲ. ಈ demands ಬಗ್ಗೆ ವಿವರವಾಗಿ ಈ ಕಡೆ ಆ ಕಡೆ ಯಾರಿಗೆ ಆಸಕ್ತಿ ಇದೆ. ಇಷ್ಟು ಸುದೀರ್ಘವಾಗಿ ಅಧಿವೇಶನ ಮಾಡಿರುವುದರಿಂದ ನಮ್ಮ ಭಾಗದಲ್ಲಿ ಹೊಸ ಶಾಸಕರಿಗೆ ಇಲ್ಲಿ ಮಾತನಾಡುವುದಕ್ಕೆ ಒಳ್ಳೆಯ ಅವಕಾಶ ಸಿಕ್ಕಿದೆ. ಸಾಕಷ್ಟು ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ನಾವು ತಮಗೆ ವಿನಂತಿ ಮಾಡಿದ್ದೇವೆ.

ಎರಡು ದಿನ ಇಲ್ಲದಿದ್ದರೆ ಮೂರು ದಿನ ಈ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆಗಳ ಮಹತ್ವ ಏನಿದೆ? ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ನಂತರ ಮುಂದಿನ ವಿಷಯಕ್ಕೆ ಹೋಗೋಣ. ಅವಸರ ಏಕೆ ಮಾಡುತ್ತೀರಿ? ನಾನು ಹೇಳುವುದೇನೆಂದರೆ, ನಾಡಿದ್ದು ಸರ್ಕಾರದ ಕಡೆಯಿಂದ reply ಇಟ್ಟುಕೊಳ್ಳಲಿ. ಇವತ್ತು ಮತ್ತು ನಾಳೆ ಇದರ ಚರ್ಚೆ ಜೊತೆಗೆ ಇನ್ನೂ ಅನೇಕ ಗಂಭೀರವಾದ ವಿಷಯಗಳನ್ನು ನಾಳೆ ಪ್ರಸ್ತಾಪ ಮಾಡಬೇಕಾಗುತ್ತದೆ.

ಅಧ್ಯಕ್ಷರು: ಹಾಗಲ್ಲ. ಈಗಾಗಲೇ ಎರಡು ದಿವಸ ಮುಗಿದುಹೋಗಿರುವುದರಿಂದ ಇವತ್ತು ಕೃಷಿ ಮತ್ತು ತೋಟಗಾರಿಕೆಯ ಬೇಡಿಕೆ ಮೇಲಿನ ಚರ್ಚೆ ಮುಗಿದುಹೋಗಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಪರವಾಗಿಲ್ಲ ಸರ್. ತಮಗೆ ನಾವು co-operate ಮಾಡುತ್ತೇವೆ. ನೀವು ಯಾವತ್ತು ಬಯಸುತ್ತೀರೋ ಆವತ್ತು ನಿಮ್ಮ ಎಲ್ಲ demands ಅನ್ನು pass ಮಾಡಿಕೊಡುವ ಜವಾಬ್ದಾರಿ ನಮ್ಮದು. ಆದ್ದರಿಂದ ಈ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬಗ್ಗೆ ಇವತ್ತು ನಾಳೆ ಚರ್ಚೆಯಾಗಿ ನಾಡಿದ್ದು reply ಕೊಡುವ ಹಾಗೆ ಮಾಡಿ. ನಾಳೆ ಇನ್ನೂ ಮಹತ್ತರವಾದ ವಿಷಯವಿದೆ. ಅದನ್ನು ನಾವು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಹಾಗಾಗಿ ದಯಾಮಾಡಿ ಇನ್ನು ಎರಡು ದಿವಸಗಳ ನಂತರ ಸರ್ಕಾರದ ಕಡೆಯಿಂದ ಉತ್ತರ ಕೊಡಲಿ. ಈಗ ಚರ್ಚೆ ಪ್ರಾರಂಭ ಮಾಡಲಿ.

ಅಧ್ಯಕ್ಷರು: ಈಗ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಕಾರ್ಮಿಕ, ಶಿಕ್ಷಣ ಎಂದು ಅಜೆಂಡಾದಲ್ಲಿ ಹಾಕಿದ್ದು ಇವೆಲ್ಲದರ ಬಗ್ಗೆ ಎರಡು–ಮೂರು ದಿವಸ ಚರ್ಚೆ ನಡೆಯಬೇಕಾ?

ಶ್ರೀ ಬಿ.ಎಸ್. ಯಡಿಯೂರಪ್ಪ: ನಡೆಯಬೇಕು. ದಯವಿಟ್ಟು ಮಾಡಲೇಬೇಕು ಸರ್.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುವುದೇನೆಂದರೆ, ಇವತ್ತು ಅಜೆಂಡಾದಲ್ಲಿ ಎಷ್ಟು ಬೇಡಿಕೆ ಇದೆ ಅಷ್ಟನ್ನೂ ಇವತ್ತು ತೆಗೆದುಕೊಂಡುಬಿಡಿ ಸರ್. ಕೃಷಿ ಮತ್ತು ಶಿಕ್ಷಣ ಎರಡರ ಬಗ್ಗೆಯೂ ಮಾತನಾಡಲಿಕ್ಕೆ ಅನುಕೂಲವಾಗುತ್ತದೆ. ಎರಡು ದಿವಸ ಚರ್ಚೆ ಮಾಡುವುದಕ್ಕೆ ಇಟ್ಟುಕೊಳ್ಳಿ.

ಅಧ್ಯಕ್ಷರು: ಆಯಿತು. ಈಗ ಕೃಷಿ ಮತ್ತು ತೋಟಗಾರಿಕೆ ಸಚಿವರು ನಿಮ್ಮ ಇಲಾಖೆಯ ಬೇಡಿಕೆಯನ್ನು ಮಂಡಿಸಿ.

ವಿತ್ತೀಯ ಕಾರ್ಯಕಲಾಪಗಳು

ಅನುದಾನ ಬೇಡಿಕೆಗಳು, 2005–06

ಬೇಡಿಕೆ ಸಂಖ್ಯೆ : 1– ಕೃಷಿ ಮತ್ತು ತೋಟಗಾರಿಕೆ

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕಃ 31–03–2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 102580.11 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು.)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಂಡಿಸುವುದಲ್ಲ. ಸದನವನ್ನು ಕೋರುತ್ತೇನೆ ಎಂದು ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ತಾವು ಮಂಡನೆ ಮಾಡಿ ಎಂದು ಹೇಳಿದಿರಿ ಅದಕ್ಕೆ ನಾನು ಮಂಡನೆ ಮಾಡಿದ್ದೇನೆ. ಮಂಡನೆ ಮಾಡಿ ಆದ ಮೇಲೆ ಇದನ್ನು ಪಾಸ್ ಮಾಡಿಕೊಡಿ ಎಂದು ನಾನು ಸದನವನ್ನು ಕೋರುತ್ತೇನೆ.

ಬೇಡಿಕೆ ಸಂಖ್ಯೆ: 23– ಕಾರ್ಮಿಕ

ಶ್ರೀ ತನ್ವೀರ್ ಶೇಠ್ (ಕಾರ್ಮಿಕ ಮತ್ತು ಹಜ್ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕಃ 31–03–2009ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10853.98 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ 17–ಶಿಕ್ಷಣ